ಅವಳಷ್ಟಕ್ಕೆ ಬಿಟ್ಟು ಬಿಡುವುದರಲ್ಲಿ ಜಾಣತನವಿತ್ತು. ನಾನು ಸುಮ್ಮನುಳಿದೆ. ಎಣಿಸಿದಂತೇ ಸಂಜೆ ವಾರಿಜ ಬಂದೊಡನೇ ಅಮ್ಮನ ಕೋಪಕ್ಕೆ ಸಿಕ್ಕಿದ್ದಳು. 'ಆ ಚಂದ್ರ ಇನ್ಮೇಲೆ ಬರ್ತಾಳೋ ಬಿಡ್ತಾಳೋ ನೀನು ನೇರ ಮನೆ ಕೆಲಸ ಮಾಡ್ಕೊಂಡು ಮನೇಲಿರು, ನಿನ್ನ ಬಿಸಿಯೂಟದ ಕೆಲಸವೇನು ದೊಡ್ಡ ಡೀಸಿ ಕೆಲಸವಾ? ನೀನು ಹೋಗ್ದೇಇದ್ರೂ ನಡ್ಯುತ್ತೆ,' ಅಮ್ಮನ ತಾಕೀತಿಗೆ ಸುಮ್ಮನೆ ತಲೆಯಾಡಿಸಿದಳು ವಾರಿಜ. ನನ್ನ ಮನಸಲ್ಲಿ ನಾಳೆಗಾದರೂ ಚಂದ್ರಾ ಬರಬಹುದೆಂಬ ನಂಬಿಕೆಯಿತ್ತು. ಆದರೆ, ಅವಳು ವಾರವಾದರೂ ಬರಲಿಲ್ಲ .

ನನ್ನ ದಿನಗಳು ಯಥಾಪ್ರಕಾರ ಯಾಂತ್ರಿಕವಾಗಿ ಮುಗಿದು ಹೋಗುತ್ತಿದ್ದವು. ಸಮಯಕ್ಕೆ ಸರಿಯಾಗಿ ಊಟಕ್ಕೆ ಕೂರುತ್ತಿದ್ದವನ ನಿಸ್ಸಂಕೋಚತೆಯ ಬಗ್ಗೆ ಅಮ್ಮ ವಾರಿಜಳಲ್ಲಿ ದೂರುತ್ತಿದ್ದಳು. ಅದ್ಯಾವುದಕ್ಕೂ ಗಮನ ಕೊಡದೆ ನಾನು ನನ್ನಷ್ಟಕ್ಕೆ ಉಳಿದೆ. ಅತ್ತ ವಾರ ಉರುಳುತ್ತಿರುವಂತೇ ಚಂದ್ರಾಳ ನಾಪತ್ತೆಯ ಕುರಿತು ಹೊಸಹೊಸ ಕಥೆಗಳು ಹುಟ್ಟಿಕೊಂಡು ಊರ ತುಂಬೆಲ್ಲ ಹರಿಯತೊಡಗಿದವು. ಓಡಿಹೋದಳಂತೆ, ಹೊಳೆಗೆ ಬಿದ್ದು ಸತ್ತಳಂತೆ, ಅದ್ಯಾರೋ ಕೊಲೆ ಮಾಡಿದರಂತೆ... ಓ ಒಂದೇ ಎರಡೇ? ಅಮ್ಮನೂ ಈ ಚರ್ಚೆಗಳಲ್ಲಿ ಮುಕ್ತವಾಗಿ ಪಾಲ್ಗೊಂಡು ಮನೆಯಂಗಳವನ್ನೇ ದೊಡ್ಡ ಚರ್ಚಾ ವೇದಿಕೆಯಾಗಿಸಿಬಿಟ್ಟಳು. ಇದಕ್ಕೆಲ್ಲ ಮೂಕವಾಗಿಯೇ ಉಳಿದ ವಾರಿಜ ಎಂದೂ ಇಲ್ಲದಂತೆ ಈಚೆಗೆ ಸ್ವಲ್ಪ ಧಾವಂತದಿಂದ ಇರುವುದನ್ನು ನಾನೂ ಗಮನಿಸಿದ್ದೆ.

'ಏನಾದ್ರೂ ಪ್ರಾಬ್ಲಮ್ಮಾ ವಾರೀ?' ನಾನು ಒಳಗೆ ನೊರಜುತ್ತಿದ್ದ ಕುತೂಹಲ ತಾಳದೆ ಕೇಳಿದಾಗಲೂ ವಾರಿಜ ಏನಿಲ್ಲವೆಂಬಂತೆ ನಸುನಕ್ಕು ತಲೆಯಾಡಿಸಿ ಸುಮ್ಮನಾಗಿಬಿಟ್ಟಿದ್ದಳು. ಆದರೆ, ನನ್ನೊಳಗಿನ ಕತೆಗಾರನಿಗೆ ಅವಳ ತುಮುಲದ ಅಂದಾಜಿತ್ತು. ಇದು ನೇರವಾಗಿ ಚಂದ್ರಾಳ ನಾಪತ್ತೆಗೆ ಸಂಬಂಧಿಸಿದೆ ಅಂತಲೂ ನನಗೆ ಅನಿಸುತ್ತಿತ್ತು. ಕಡೆಗೆ ನಾನು ಅಂದುಕೊಂಡಂತೆಯೇ ಆಯಿತು.

ಹಾಗೂ ಹೀಗೂ ವಾರ ಕಳೆದು ನಾಲ್ಕನೇ ದಿನಕ್ಕೆಲ್ಲ ಚಂದ್ರಾ ಬುರ್ಖಾ ತೊಟ್ಟುಕೊಂಡು ಖಾಲಿ ನೆತ್ತಿಯಲಿ ಕಂಗೊಳಿಸುತ್ತ ಬಂದಾಗ ಕೊಂಚ ಸದ್ದಡಗಿದ್ದ ಊರು ಮತ್ತೆ ಸದ್ದುಮಾಡತೊಡಗಿತ್ತು. ಸೋಡಾದ ಶೀಷೆಯಿಂದ ಹೊರಬಂದ ಬುರುಗಿನಂತೆ ನಾನಾ ನಮೂನೆ ಅಭಿಪ್ರಾಯಗಳು ಬುದಬುದನೆ ಮೇಲೇರಿ ಬಂದವು. ನನಗೂ ಆಶ್ಚರ್ಯವೇ...

'ಇದೇನೇ ಚಂದ್ರಾ, ಹೊಸ ಅವತಾರ?' ಅಮ್ಮ ಬಾಗಿಲು ತಟ್ಟಿದವಳನ್ನ ಕಂಡು ಮೆಟ್ಟಿಬಿದ್ದಿದ್ದರು.

'ಅಮ್ಮ ನನ್ನ ಹೆಸ್ರು ಬದ್ಲಾಗಿದೆ,ಇನ್ಮುಂದೆ ಚಾಂದ್ ಬೀ ಅಂತ ಕರೀರಿ, ಇನ್ನು. ಅಮ್ಮ, ನಾಳೆಂದ ನಾ ಕೆಲ್ಸಕ್ಕೆ ಬರಲ್ಲಮ್ಮ, ಅವ್ರು ಹೋಗ್ಬೇಡಾಂತ ಹೇಳಿದ್ದಾರೆ' ಚಂದ್ರಾಳ ಮಾತಿಗೆ ಅಮ್ಮ ಕುತೂಹಲದಲ್ಲಿ ಕುದಿಯುತ್ತ, 'ಅವರೆಂದರೆ ಯಾರೇ?' ಅಂದಳು. ಆ ಸಮಯದಲ್ಲಿ ಅವಳಿಗೆ ಹೊಸ ಗುಟ್ಟನ್ನು ತಾನು ಒಡೆಯುತ್ತಿರುವ ಸಂಭ್ರಮವಿದ್ದಂತೆ ತೋರುತ್ತಿತ್ತು.

'ಅಮ್ಮಾ, ನಮ್ಮ ಚಂದ್ರಾನ ಕಾಸಿಂ ಸಾಬಿ ಮದ್ವೆ ಮಾಡ್ಕೊಂಡಿದ್ದಾನೆ' ವಾರಿಯ ಮಾತಿಗೆ ಅಮ್ಮ ಆಶ್ಚರ್ಯದಿಂದ ಅರೆ ಕ್ಷಣ ಮೂಕವಾಗಿದ್ದಳು.

'ನಿಂಗ್ಹೇಗೇ ಗೊತ್ತು?' ಸಾವರಿಸಿಕೊಂಡು ಕೇಳಿದ ಅಮ್ಮನ ದನಿ ತೀಕ್ಷ್ಣವಾಗಿತ್ತು.

'ಎಲ್ಲ ಸುಸೂತ್ರ ಆಗ್ಲೀಂತ ನಾನೇ ಸುಮ್ನಿದ್ದಮ್ಮ' ವಾರಿ ಮೆಲುವಾಗಿ ಹೇಳಿದಾಗ ಅಮ್ಮ ವಾರಿಜಳತ್ತ ದುರುಗುಟ್ಟಿದಳು. ನಾನು ಕಂಡೂ ಕಾಣದಂತೆ ಸುಮ್ಮನಾದರೂ ನನ್ನೊಳಗೆ ವಾರಿಜಳ ಮೇಲೆ ಮೆಚ್ಚುಗೆ ತುಂಬಿ ಬಂತು. ಚಂದ್ರಾ ತೆಗೆದುಕೊಂಡ ನಿರ್ಧಾರದ ಬೆನ್ನಿಗೆ ವಾರಿಜಳ ಸಪೋರ್ಟ್ ಇಲ್ಲದಿರಲಿಲ್ಲ ಅನ್ನುವುದು ನನಗೆ ನಿಚ್ಚಳ ಅರ್ಥವಾಯ್ತು. ಅಮ್ಮನಿಗೂ ಆಗಿರಬೇಕು... ಅದಕ್ಕೇ ಅವಳು ಸಿಟ್ಟಾಗಿದ್ದಳು.